2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ
ದಾವಣಗೆರೆ .
SC/ST. No.09-2020

ದೋ.ಸಾ. 6
ಅ.ಸಾ. 2
ಪ್ರ.ವ.ಬೊ.ದಿನಾಂಕ. 22-05-2024

| | | |
|---|---|---|
| ಹೆಸರು ಶ್ರೀ/ ಶ್ರೀ ಮತಿ. | - | ವಿನಯ್ |
| ತಂದೆ / ಗಂಡನ ಹೆಸರು | - | ರಾಮಪ್ಪ |
| ವಯಸ್ಸು | - | 30 |
| ಉದ್ಯೋಗ | - | ಬೆಸ್ಕಾಂ ನಲ್ಲಿ ಕಿರಿಯ ಅಭಿಯಂತರರು, ಬೆಂಗಳೂರು ಉತ್ತರ ವೃತ್ತ |
| ವಾಸ ಸ್ಥಳ | - | ಬೆಂಗಳೂರು |

ಮುಖ್ಯ ವಿಚಾರಣೆಃ - ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ಪ್ರಾ.ಸಾ.1 ನನ್ನ ತಂದೆ. ನಾವು ಪರಿಶಿಷ್ಟ ಜಾತಿಯ ಬೋವಿ ಜನಾಂಗಕ್ಕೆ ಸೇರಿದವರಾಗಿರುತ್ತೇವೆ. ನನಗೆ ಈ ಪ್ರಕರಣದ ಆರೋಪಿತನ ಪರಿಚಯ ಇರುತ್ತದೆ. ಈ ದಿನ ಆರೋಪಿತನು ನ್ಯಾಯಾಲಯಕ್ಕೆ ಗೈರು ಹಾಜರಾಗಿದ್ದು, ಆತನ ಗುರುತಿಸುವಿಕೆಯ ಕುರಿತು ಆರೋಪಿ ಪರ ವಕೀಲರು ತಕರಾರು ಇಲ್ಲ ಎಂದು ನುಡಿದಿರುತ್ತಾರೆ. ಆತ ಮೇಲ್ವರ್ಗಕ್ಕೆ ಸೇರಿದ ವ್ಯಕ್ತಿಯಾಗಿರುತ್ತಾರೆ.

ಮೊದಲು ನನ್ನ ತಂದೆಯು ಪ್ರಾಧ್ಯಾಪಕರಾಗಿ ಕೆಲಸ ಮಾಡುತ್ತಿದ್ದು, ನಂತರ ರಾಜಕೀಯ ಸೇವೆಯಲ್ಲಿ ಪಾಲ್ಗೊಂಡಿರುತ್ತಾರೆ. ದಿಃ 12-11-2019 ರಂದು ಮಹಾನಗರ ಪಾಲಿಕೆಯ ಚುನಾವಣೆ ಇತ್ತು. ನಮ್ಮ ಮನೆಯ ಎದುರು ಸೆಂಟ್ ಜಾನ್ ಶಾಲೆ ಇದ್ದು, ಅಲ್ಲಿ ಮತ ಕೇಂದ್ರ ಸ್ಥಾಪನೆಯಾಗಿತ್ತು. ಆ ಸಮಯದಲ್ಲಿ ನಮ್ಮ ಮನೆಯ ಎದುರು ಇರುವ ರಸ್ತೆಯ ಅಕ್ಕಪಕ್ಕದಲ್ಲಿ ಬೇರೆ ಬೇರೆ ಪಕ್ಷದ ಜನರು ಮತದಾರರಿಗೆ ಚೀಟಿ ಬರೆದು ಕೊಡುವ ಕುರಿತಾಗಿ ಖುರ್ಚಿ ಟೇಬಲ್ ಗಳನ್ನು ಹಾಕಿಕೊಂಡು ಕುಳಿತಿದ್ದರು. ನಂತರ ಆ ಸಮಯದಲ್ಲಿ ನಮ್ಮ ಮನೆಯ ಎದುರು ಸ್ಕಾರ್ಪಿಯೋ ಹಾಗೂ ಫೋರ್ಡ್ ಕಾರುಗಳಲ್ಲಿ ಕೆಲವರು ಪದೇ ಪದೇ ಬಂದು ಹೋಗಿ ಮಾಡುತ್ತಿದ್ದರು.

ನಂತರ ನಮ್ಮ ತಂದೆ ನಡೆಸುತ್ತಿದ್ದ ವಿದ್ಯಾ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ ಸಾಕ್ಷಿ-2, 3 ಹಾಗೂ 4 ರವರು ನಮ್ಮ ಮನೆಯ ಗೇಟಿನ ಬಳಿ ನಿಂತುಕೊಂಡು ಮಾತನಾಡುತ್ತಿರುವಾಗ ಆರೋಪಿತನು ಬಿಳಿ ಶರ್ಟ್ ಹಾಗೂ ಬಿಳಿ ಪ್ಯಾಂಟನ್ನು ತೊಟ್ಟುಕೊಂಡು, ಅಲ್ಲದೇ ಕೇಸರಿ ಶಾಲನ್ನು ಹಾಕಿಕೊಂಡು ಬೆಳಿಗ್ಗೆ 11-00 ಗಂಟೆ ಸಮಯದಲ್ಲಿ ಗುಂಪಿನೊಂದಿಗೆ ನಮ್ಮ ಮನೆಯ ಎದುರು ಬಂದು ನನ್ನ ತಂದೆಯನ್ನು ಉದ್ದೇಶಿಸಿ ಮನೆ ಕಡೆ ತೋರಿಸಿ ವಡ್ಡ ಸೂಳೇ ಮಗ ರಾಮನ ಮನೆ ಇದು, ಕೀಳು ಜಾತಿಯವನು ಎಂದು ಹೇಳಿರುತ್ತಾರೆ. ಅಲ್ಲದೇ ಪೋಲೀಸರು ಇದ್ದಾರೆ ಎಂದು ತುಂಬಾ ನಿಗುರಾಡುತ್ತ ಇದ್ದಾನೆ, ಈತನನ್ನು ಸುಮ್ಮನೆ ಬಿಡುವುದಿಲ್ಲ ಎಂದು ಬೈದಾಡಿರುತ್ತಾನೆ. ನಂತರ ನನ್ನ ತಂದೆ ಸದರಿ ಚುನಾವಣಾ ಸ್ಥಳದಲ್ಲಿ ಗಲಾಟೆಯಾಗಬಾರದು ಎಂದು ತಮ್ಮ ಕಾರಿನಲ್ಲಿ ಡಬಲ್ ರಸ್ತೆಯ ಬಳಿ ಹೋಗಿ ದಾವಣಗೆರೆಯ ಪೋಲೀಸ್ ಅಧೀಕ್ಷಕರಿಗೆ ವಿಷಯವನ್ನು ತಿಳಿಸಿ ವಾಪಾಸು ಮನೆಗೆ ಬಂದಿದ್ದು, ಆಗಲೂ ಕೂಡ ಆರೋಪಿತನು ನಮ್ಮ ಮನೆಯ ಎದುರು ನಿಂತುಕೊಂಡು ಬೈದಾಡುತ್ತಿದ್ದನು. ನಂತರ ಸ್ಥಳಕ್ಕೆ ಪೋಲೀಸರು ಬಂದು ಗಲಾಟೆಯನ್ನು ತಿಳಿಗೊಳಿಸಿರುತ್ತಾರೆ.

ನಂತರ ಅದೇ ದಿನ ಸಂಜೆ 8-30 ಗಂಟೆಗೆ ನಾನು, ನನ್ನ ತಂದೆ ಹಾಗೂ ನನ್ನ ತಾಯಿ ಮನೆಯಿಂದ ಹೊರಗೆ ಹೋಗುತ್ತಿರುವಾಗ ಆರೋಪಿತನು ನನ್ನ ತಂದೆಗೆ ದೂರವಾಣಿ ಮಾಡಿ ನನ್ನ ತಂದೆಗೆ ಅವಾಚ್ಯ ಶಬ್ದಗಳಿಂದ

ಬೈದಿರುತ್ತಾನೆ. ಅಲ್ಲದೇ ನನ್ನ ಮೇಲೆ ಯಾಕೆ ಕೇಸು ಹಾಕಿದ್ದೀಯಾ ಎಂದು ಹೇಳಿ ನನ್ನ ತಂದೆಗೆ ಬೈದಿರುತ್ತಾನೆ. ಅಲ್ಲದೇ ನನ್ನ ಹಿಂದೆ ದೊಡ್ಡ ಶಕ್ತಿ ಇದೆ ನಿನ್ನನ್ನು ಸುಮ್ಮನೆ ಬಿಡುವುದಿಲ್ಲ ಎಂದು ನನ್ನ ತಂದೆಗೆ ಬೆದರಿಕೆ ಹಾಕಿರುತ್ತಾನೆ.

ನಾವು ನಮ್ಮ ಮನೆಗೆ ಸಿಸಿ ಟಿವಿ ಕ್ಯಾಮರಾಗಳನ್ನು ಅಳವಡಿಸಿದ್ದು, ಆರೋಪಿತನು ಮಾಡಿದ ಕೃತ್ಯವು ಸದರಿ ಸಿಸಿ ಟಿವಿಯಲ್ಲಿ ರೆಕಾರ್ಡ್ ಆಗಿರುತ್ತದೆ. ನಮ್ಮ ಮನೆಯಲ್ಲಿ ಅಳವಡಿಸಲಾಗಿದ್ದ ಸಿಸಿ ಟಿವಿಯು 41 ನಿಮಿಷ ಸ್ಟ್ಯಾಂಡರ್ಡ್ ಟೈಮ್ ಗಿಂತ ಮುಂದೆ ಇರುತ್ತದೆ. ಈ ಮೊದಲು ಲೋಕಸಭಾ ಚುನಾವಣೆ ನಡೆದಿದ್ದು, ಆ ಸಮಯದಲ್ಲಿ ಆರೋಪಿತ ಹಾಗೂ ಇತರರು ಸೇರಿಕೊಂಡು ನನ್ನ ತಂದೆಯ ವಿರುದ್ಧ ಪ್ರತಿಭಟನೆ ಮಾಡಿದ್ದು, ಆ ಕುರಿತಾಗಿ ನನ್ನ ತಂದೆ ಪೋಲೀಸರಿಗೆ ಆರೋಪಿ ಹಾಗೂ ಇತರರ ವಿರುದ್ಧ ಜಾತಿ ನಿಂದನಾ ಪ್ರಕರಣವನ್ನು ದಾಖಲು ಮಾಡಿದ್ದು, ಅದೇ ದ್ವೇಷದಿಂದ ಆರೋಪಿತನು ಈ ಪ್ರಕರಣದ ಅಪರಾಧವನ್ನು ಮಾಡಿರುತ್ತಾನೆ.

ಈ ರೀತಿ ಆರೋಪಿತನು ನಮ್ಮ ತಂದೆಗೆ ಜಾತಿ ನಿಂದನೆ ಹಾಗೂ ದೂರವಾಣಿ ಮಾಡಿ ಬೆದರಿಕೆ ಹಾಕಿರುವ ಕಾರಣ ನನ್ನ ತಂದೆ ಆರೋಪಿತನ ವಿರುದ್ಧ ದೂರನ್ನು ದಾಖಲಿಸಿರುತ್ತಾರೆ. ಆ ರೀತಿ ಜಾತಿ ನಿಂದನೆ ಮಾಡಿದ ಕಾರಣ ನನಗೆ ನನ್ನ ತಂದೆಗೆ ಹಾಗೂ ನನ್ನ ತಾಯಿಗೆ ತುಂಬಾ ಮನಸ್ಸಿಗೆ ನೋವುಂಟಾಗಿರುತ್ತದೆ.

ನಂತರ ದಿಃ 25-11-2019 ರಂದು ನನಗೆ ಪೋಲೀಸರು ನಮ್ಮ ಮನೆಯ ಸಿಸಿ ಟಿವಿಯ ದೃಶ್ಯಾವಳಿಗಳನ್ನು ನೀಡುವಂತೆ ಕೋರಿ ನೋಟೀಸನ್ನು ನೀಡಿರುತ್ತಾರೆ. ಸದರಿ ನೋಟೀಸನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.12 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿ.ಪಿ.12(ಎ) ಎಂದು ಗುರುತಿಸಲಾಯಿತು. ನಂತರ ಮರುದಿನ ಪೋಲೀಸರು ಓರ್ವ ಟೆಕ್ನೀಶಿಯನ್ ಆಗಿರುವ ಚಾ.ಸಾ.13 ರವರನ್ನು ನಮ್ಮ ಮನೆಗೆ ಕರೆದುಕೊಂಡು ಬಂದು ನಾನು ತೋರಿಸಿಕೊಟ್ಟ ಪ್ರಕಾರ ನಮ್ಮ ಮನೆಯ ಸಿಸಿ ಟಿವಿಯ ದೃಶ್ಯಾವಳಿಗಳನ್ನು ಒಂದು ಪೆನ್ ಡ್ರೈವ್ ಗೆ ವರ್ಗಾವಣೆ ಮಾಡಿಕೊಂಡು ಸ್ಥಳದಲ್ಲಿ ಪಂಚನಾಮೆಯನ್ನು ಬರೆದು ನನ್ನ ಸಹಿಯನ್ನು ಅದಕ್ಕೆ ಪಡೆದುಕೊಂಡಿರುತ್ತಾರೆ. ಸದರಿ ಪಂಚನಾಮೆಯನ್ನು ನಿ.ಪಿ.13 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿ.ಪಿ.13(ಎ) ಎಂದು ಗುರುತಿಸಲಾಯಿತು. ಅಲ್ಲದೇ ಆ ಸಮಯದಲ್ಲಿ ಪೋಲೀಸರು ಸ್ಥಳದ ಪೋಟೋಗಳನ್ನು ಕೂಡ ತೆಗೆದಿರುತ್ತಾರೆ. ಸದರಿ ಪೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ನಿ.ಪಿ.14 ರಿಂದ 16 ಎಂದು ಗುರುತಿಸಲಾಯಿತು.

ನಂತರ ದಿಃ 27-11-2019 ರಂದು ಠಾಣೆಗೆ ನಾನು ಮತ್ತು ನನ್ನ ತಂದೆ ಬಂದು ನನ್ನತಂದೆಯ ಮೊಬೈಲ್ ನಲ್ಲಿ ಶೇಖರಣೆಯಾಗಿದ್ದ ಆರೋಪಿ ಮತ್ತು ನನ್ನತಂದೆಯ ನಡುವಿನ ಸಂಭಾಷಣೆಯನ್ನು ಬ್ಲೂ ಟೂತ್ ಮೂಲಕ ಠಾಣೆಯ ಕಂಪ್ಯೂಟರ್ ಗೆ ವರ್ಗಾಯಿಸಿ ಅದನ್ನು ಪೆನ್ ಡ್ರೈವ್ ಗೆ ವರ್ಗಾಯಿಸಿ ಪಂಚನಾಮೆ ಬರೆದು ಅದಕ್ಕೆ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಸದರಿ ಪಂಚನಾಮೆಯು ಈಗಾಗಲೇ ನಿ.ಪಿ.6 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.6(ಬಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಪೋಲೀಸರು ನಿ.ಪಿ.8 ಮತ್ತು 9 ರಂತೆ ಪೋಟೋಗಳನ್ನು ಕೂಡ ತೆಗೆದಿರುತ್ತಾರೆ.

ನಾನು ಸದರಿ ದೃಶ್ಯಾವಳಿಗಳನ್ನು ಹಾಗೂ ಆಡಿಯೋ ಸಂಭಾಷಣೆಯನ್ನು ನೋಡಿದರೆ ಗುರುತಿಸುತ್ತೇನೆ. ಅಲ್ಲದೇ ಸದರಿ ಎರಡು ಸಮಯಗಳಲ್ಲಿ ನಾನು ಸದರಿ ವೀಡಿಯೋ ಹಾಗೂ ಆಡಿಯೋಗಳನ್ನು ಸಂಗ್ರಹಿಸಿ ನೀಡಿದ ಕುರಿತಾಗಿ ನನ್ನ ಪ್ರತ್ಯೇಕ 65ಬಿ ಪ್ರಮಾಣ ಪತ್ರಗಳನ್ನು ನೀಡಿರುತ್ತೇನೆ. ಸದರಿ ಪ್ರಮಾಣ ಪತ್ರಗಳನ್ನು ಕ್ರಮವಾಗಿ ನಿ.ಪಿ.17 ಮತ್ತು 18 ಎಂದು ಹಾಗೂ ಅವುಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ನಿ.ಪಿ.17(ಎ) ಮತ್ತು 18(ಎ) ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಸಾಕ್ಷಿಗೆ ನಿ.ಪಿ.10 ಪೆನ್ ಡ್ರೈವ್ ಅನ್ನು ಲ್ಯಾಪ್ ಟಾಪ್ ಗೆ ಅಳವಡಿಸಿ ಅವುಗಳಲ್ಲಿ ಇದ್ದ ಸಂಭಾಷಣೆಗಳನ್ನು ಕೇಳಿಸಲಾಗಿದ್ದು, ಅದನ್ನು ಕೇಳಿ ಸಾಕ್ಷಿಯು ಅದು ತನ್ನ ತಂದೆ ಮತ್ತು ಆರೋಪಿತನ ನಡುವೆ ಆಗಿರುವ ಆಡಿಯೋ ಸಂಭಾಷಣೆ ಎಂದು ನುಡಿದಿರುತ್ತಾರೆ. ಸದರಿ ಸಂಭಾಷಣೆಯನ್ನು ಕೇಳಲಾಗಿ ಅವು ಈ ಕೆಳಗಿನಂತೆ ಇರುವುದು ಕೇಳಿಬಂದಿರುತ್ತದೆ.

" ಹಲೋ ಹಲೋ ರಾಮಪ್ಪನವರ,

ನಾನು ನಾಗರಾಜ್ ಲೋಕಿಕೆರೆ ರೀ, ಹ್ವಾ, ನಾಗರಾಜ್ ಲೋಕಿಕೆರೆ,

ನಾಗರಾಜ್ ಲೋಕಿಕೆರೆ,

ಏನ್ ಹೇಳ್ರಿ,

ಏನಾ ಬಾಳ ಮಾತಾಡಿದ್ರಂತಲ್ರೀ ನಮ್ಮ ಬಗ್ಗೆ ಸುಮ್ಮನೆ,

ಏನು ನಿಮ್ಮ ಬಗ್ಗೆ ಮಾತನಾಡಿರುವುದು,

ಏನ್ ಊರಾಗೇ, ಊರಾಗೇನೋ ಹೆಸರು ಕೆಡಿಸಿಕೊಂಡು ಬಂದಾನೆ ಇಲ್ಲಿ ಹೇಗೆ ಲೀಡರು ಎಂದು ಒಪ್ಪಿಕೊಂತಿರೀ, ನಮ್ಮೂರಾಗೆ ನಾನು ಯಾವಾಗ ಹೆಸರು ಕೆಡಿಸಿಕೊಂಡು ಬಂದೀನಿ, ನಮ್ಮೂರ ನಾನ್ಯಾವಗ ಜೀವನ ಮಾಡಿದ್ದೀನಿ,

ಲೇ ಯಾವನಲೇ ಮಾತನಾಡುತಿರೋದು, ಯಾರ ಹತ್ತಿರ ಮಾತನಾಡುತ್ತಿದ್ದೀರಿ,

ನಿಮ್ಮ ಹತ್ತಿರನೇ ಮಾತನಾಡುತ್ತಿರುವುದು,

ನನ್ನ ಎದುರಿಗೆ ಬಂದು ಮಾತನಾಡು,
ಯಾವನಲೋ ಹೇಳಿದ್ದು, ಕರೆದುಕೊಂಡು ಬಾ ಅವನಿಗೆ,

ರಾಮಪ್ಪ ನಾನು ಹೇಳುವುದನ್ನು ಕೇಳು,

ಪೋಲೀಸರಿಗೆ ಹೇಳಬೇಕೋ ಹೆಂಗೆ, ಪೋಲೀಸರನ್ನು ಕರೆಸಲಾ, ಯಾವನ್ಲಾ ನೀನು ಮಾತನಾಡುತ್ತಿರುವುದು, ಇಡೋ ನಿನ್ನ ಫೋನು,

ನೀನು ಫೋನು ಇಡು, ನನಗೇನು ಹೇಳುತ್ತಿದ್ದೀಯಾ ನೀನು,

ನೀನು ಬೋಳಿಮಗ, ನೀನು ಬೋಳಿಮಗ, ಆದೇನ್ ಮಾಡ್ತೀಯೋ ಮಾಡಲೇ, ನಿನಗೆ ತಾಕತ್ತಿದ್ದರೆ ಮಾಡಲೇ,

ಫೋನ್ ಮಾಡಿ ನೀನ್ ಮಾತನಾಡುತ್ತಿದ್ದೀಯಾ,

ನಾನು ನಿನಗೇನಾದ್ರೂ ಮಾಡಿದ್ದೆನಾ, ಸುಮ್ಮನೆ ನನ್ನ ಮೇಲೆ ಯಾಕೆ ಕೇಸು ಕೊಟ್ಟಿದ್ದೀಯಾ,

ಯಾವನಲಾ ಮಾತನಾಡಿದ್ದು, ಕರೆದುಕೊಂಡು ಬಾ ಅವನನ್ನ,

ಯಾರು ನಿನಗೆ ಬೈದಿದ್ದಾನಲ್ಲ ಅವನ ಮೇಲೆ ಕೇಸು ಕೊಡಬೇಕಿತ್ತು, ನನ್ನ ಮೇಲೆ ಹೇಗೆ ಕೊಟ್ಟೆ ಕೇಸು ನೀನು, ನಾನು ನಿನಗೆ ಅಂದಿರೋದು ಏನು ಪ್ರೂಫ್ ತೋರಿಸು, ಏನಾದರೂ ಪ್ರೂಫ್ ತೋರಿಸು, ನಾನು ನಿನಗೆ ಏನಾದರೂ

ಅಂದಿರೋದು,

ನಾನು ನನಗೆ ಯಾರು ಯಾರು ಏನು ಹೇಳಿದ್ದಾರೆ ಎಲ್ಲಾ ಪ್ರೂಫು ಕೊಟ್ಟಿದ್ದೇನೆ ಕಣೋ,

ನಾನು ನಿನಗೆ ಮಾತನಾಡಿದ್ದು ಒಂದೇ ಒಂದು ಪ್ರೂಫ್ ತೋರಿಸು ಸಾಕು,

ಮತ್ತೆ ಪುನಃ ಏನಾದರೂ ದೂರವಾಣಿ ಮಾಡಿದರೆ ನಿನಗೆ ಒಂದು ಗತಿ ಕಾಣಿಸುತ್ತೇನೆ, ಇಡಲೇ ಪೋನು ಮಗನೇ ಇಡಲೇ ಪೋನು" ಎಂದು ಮಾತನಾಡಿರುವುದು ಕಂಡುಬಂದಿರುತ್ತದೆ.

ಈ ಹಂತದಲ್ಲಿ ಸಾಕ್ಷಿಯು ಮೊದಲಿಗೆ ಹಲೋ ಹಲೋ ರಾಮಪ್ಪನವರ ಎಂದು ಮಾತನಾಡಿದ ಧ್ವನಿಯು ಲೋಕಿಕೆರೆ ನಾಗರಾಜ ಅವರ ಧ್ವನಿಯಾಗಿರುತ್ತದೆ ಎಂದು ನುಡಿದಿರುತ್ತಾರೆ.

ಅದೇ ರೀತಿ ಈ ಹಂತದಲ್ಲಿ ಆರೋಪಿ ಪರ ವಕೀಲರ ಸಮಕ್ಷಮದಲ್ಲಿ ಇನ್ನೊಂದು ಸೀಲು ಹಾಕಿದ ಕವರನ್ನು ತೆರೆದು ಅದರಲ್ಲಿ ಇದ್ದ ಒಂದು ಪೆನ್ ಡ್ರೈವ್ ಅನ್ನು ಸಾಕ್ಷಿಗೆ ತೋರಿಸಲಾಗಿದ್ದು, ಅದನ್ನು ನೋಡಿ ಸಾಕ್ಷಿಯು ಗುರುತಿಸಿದ್ದು, ಅದನ್ನು ನಿ.ಪಿ.19 ಎಂದು ಗುರುತಿಸಲಾಯಿತು. ಈ ಹಂತದಲ್ಲಿ ಸದರಿ ಪೆನ್ ಡ್ರೈವ್ ಅನ್ನು ಲ್ಯಾಪ್ ಟಾಪ್ ಗೆ ಅಳವಡಿಸಿ ಅದರಲ್ಲಿ ಇರುವ ದೃಶ್ಯಾವಳಿಗಳನ್ನು ತೆರೆಯಲಾಗಿರುತ್ತದೆ.

ಸದರಿ ದೃಶ್ಯಾವಳಿಗಳಲ್ಲಿ ಸಂಗ್ರಹವಾದ ದೃಶ್ಯಾವಳಿಗಳು ನಮ್ಮ ಮನೆಯ 3 ನೇ ಕ್ಯಾಮರಾದ ಮೂಲಕ ಸಂಗ್ರಹಿಸಲಾದ ದೃಶ್ಯಾವಳಿಗಳಾಗಿರುತ್ತವೆ. ಸದರಿ ನಿ.ಪಿ.19 ನ್ನು ತೆರೆದಾಗ ಅದರಲ್ಲಿ ಐದು ಪೈಲ್ ಗಳು ಇರುವುದು ಕಂಡುಬಂದಿರುತ್ತದೆ. ಒಂದನೇ ಪೈಲನ್ನು ತೆರೆದಾಗ ದಿಃ 12-11-2019 ರ ಬೆಳಿಗ್ಗೆ 10-00 ರಿಂದ 10-59 ನಿಮಿಷ 59 ಸೆಕೆಂಡುಗಳ ದೃಶ್ಯಾವಳಿಯಾಗಿದ್ದು, ಅದನ್ನು ನೋಡಿ ಸಾಕ್ಷಿಯು ಅದರಲ್ಲಿ ನಮ್ಮ ಮನೆ ಹಾಗೂ ನಮ್ಮ ಮನೆಯ ಎದುರಿನ ದೃಶ್ಯಾಗಳಿಗಳು ಕಂಡುಬರುತ್ತಿವೆ ಎಂದು ನುಡಿದಿರುತ್ತಾರೆ. ಎರಡನೇ ಪೈಲನ್ನು ತೆರೆದಾಗ ಅದು 11-00 ಗಂಟೆಯಿಂದ 11-59.59 ನಿಮಿಷಗಳ ದೃಶ್ಯಾವಳಿಯಾಗಿದ್ದು, ಅದರಲ್ಲಿ 11-46 ನಿಮಿಷದ ಸಮಯದಲ್ಲಿ ಓರ್ವ ವ್ಯಕ್ತಿಯು ಮತಗಟ್ಟೆಯ ಬಳಿ ಏಜೆಂಟರು ಕುಳಿತಿದ್ದ ಸ್ಥಳದಿಂದ ಬಂದಿದ್ದು, ಆತ ಕೇಸರಿ ಬಣ್ಣದ ಶಾಲು ಧರಿಸಿದ್ದು, ಆ ರೀತಿ ಬಂದವನು ಅಲ್ಲಿ ನಿಂತಿದ್ದ ವ್ಯಕ್ತಿಗಳ ಜೊತೆ ಮಾತನಾಡುತ್ತಿರುವುದು ಮತ್ತು ಆತನ ಮುಖ ಸಿಸಿ ಟಿವಿ ದೃಶ್ಯಾವಳಿ ಗೋಚರವಾಗುವ ಕಡೆಗೆ ಇರುವುದು ಕಂಡುಬಂದಿರುತ್ತದೆ. ಅದೇ ರೀತಿ 11-48 ನಿಮಿಷಕ್ಕೆ ಪ್ರಾ.ಸಾ.1 ರವರು ಮನೆಯಿಂದ ಕಾರಿನಿಂದ ಹೊರಗಡೆ ಹೋಗುವ ದೃಶ್ಯ ಹಾಗೂ ಮೂರನೇ ಪೈಲಿನಲ್ಲಿ 12-00 ಗಂಟೆ 56 ಸೆಕೆಂಡಿಗೆ ಪ್ರಾ.ಸಾ.1 ರವರು ಕಾರಿನಿಂದ ವಾಪಾಸು ಬರುತ್ತಿರುವುದು ಕಂಡುಬಂದಿರುತ್ತದೆ. ನಂತರ 12-00 ಗಂಟೆ 56 ಸೆಕೆಂಡಿನಲ್ಲಿ ಕೇಸರಿ ಶಾಲು ಧರಿಸಿದ್ದ ವ್ಯಕ್ತಿಯನ್ನು ತೋರಿಸಿ ಆತ ಆರೋಪಿಯಾಗಿರುತ್ತಾನೆ ಎಂದು ನುಡಿದಿದ್ದು, ಆರೋಪಿ ಪರ ವಕೀಲರು ಸದರಿ ವ್ಯಕ್ತಿ ಆರೋಪಿತನೇ ಎಂದು ಸರಿಯಾಗಿ ಗೋಚರವಾಗುತ್ತಿಲ್ಲ ಎಂದು ತಕರಾರು ವ್ಯಕ್ತಪಡಿಸಿರುತ್ತಾರೆ. ತದನಂತರ 12-02 ನಿಮಿಷಕ್ಕೆ ಪೋಲೀಸರು ಸ್ಥಳಕ್ಕೆ ಜೀಪಿನಲ್ಲಿ ಬರುತ್ತಿರುವ ದೃಶ್ಯಾವಳಿ ಕಂಡುಬಂದಿರುತ್ತದೆ.

<u>ಪಾಟೀಸವಾಲುಃ</u> ಆರೋಪಿಪರ ವಕೀಲರಿಂದ.

( ಈ ಹಂತದಲ್ಲಿ ಆರೋಪಿ ಪರ ವಕೀಲರು ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು , ಕಾಲಾವಕಾಶ ನೀಡಲಾಗಿರುತ್ತದೆ.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ . ಹೇ. ಕೇ. ಸರಿಯಾಗಿದೆ.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಹಾಗೂ ವಿಶೇಷ ನ್ಯಾಯಾಧೀಶರು , ದಾವಣಗೆರೆ.